# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **325** |
| **ಸದಸ್ಯರ ಹೆಸರು** | **ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **14.09.2022** |
| **ಉತ್ತರಿಸಬೇಕಾದ ಸಚಿವರು** | **ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.** |
| **ಪ್ರಶ್ನೆ** | **ಉತ್ತರ** |
| ಅ) ಶಿವಮೊಗ್ಗದ ಮಾಚೇನಳ್ಳಿಯ ಕೈಗಾರಿಕಾ ವಸಾಹತು ಪಕ್ಕದಲ್ಲಿ ಸರ್ಕಾರದ ವತಿಯಿಂದ ಐಟಿ ಎಸ್ ಇಜೆಡ್ (IT SEZ) ಗಾಗಿ 22 ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದ್ದು, ಅದರಲ್ಲಿ 2.5 ಎಕರೆ ಜಾಗದಲ್ಲಿ ಎಮ್‌ಎನ್‌ಸಿ (MNC) ಕಂಪನಿಯೊಂದು ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್ ನಂತರದ ಪರಿಸ್ಥಿತಿಯಲ್ಲಿ ಕಂಪನಿಯ ಸಿಬ್ಬಂದಿ ವರ್ಗದವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿರುವುದು ಹಾಗಾಗಿ ಸದರಿ ಜಾಗದಲ್ಲಿ ಆಹಾರ ಸಂಸ್ಕರಣಾ ಪಾರ್ಕ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಥವಾ ಬೇರೆ MNC ಕಂಪನಿಗಳಿಗೆ ಅವಕಾಶ ಕೊಟ್ಟರೆ 22 ಎಕರೆ ಜಾಗವನ್ನು ಬಳಸಿಕೊಳ್ಳುವ ಬಗೆಗಿನ ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ? | ಶಿವಮೊಗ್ಗದ ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 36 ಎಕರೆ ಜಮೀನಿನಲ್ಲಿ ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯ (IT-SEZ) ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ(ಕಿಯೋನಿಕ್ಸ್)ಕ್ಕೆ ಅನುಮತಿ ನೀಡಿತ್ತು. ಈ 36 ಎಕರೆ ಪ್ರದೇಶದಲ್ಲಿ ಅನುಪಯುಕ್ತ ಪ್ರದೇಶ, ರಸ್ತೆ, ಚರಂಡಿ ಮತ್ತು ಗೋಡೆಯ ನಿರ್ಮಾಣದ ಪ್ರದೇಶ 11 ಎಕರೆಯನ್ನು ಕಳೆದ ನಂತರ 25 ಎಕರೆಯು ಮಾಹಿತಿ ತಂತ್ರಜ್ಞಾನ ವಿಶೇಷ ಆರ್ಥಿಕ ವಲಯ(IT-SEZ) ಜಾಗವಾಗಿ ಉಳಿದಿರುತ್ತದೆ.<br><br>ಈ 25 ಎಕರೆ IT-SEZ ಪ್ರದೇಶದಲ್ಲಿ M/s. Cambridge Solutions Ltd. ಕಂಪನಿಗೆ 6 ಎಕರೆ ಜಮೀನನ್ನು 2010ರಲ್ಲಿ ಹಂಚಿಕೆ ಮಾಡಲಾಗಿದೆ. ಸದರಿ ಜಾಗದಲ್ಲಿ ಕಂಪನಿಯು ಕಾರ್ಯಚಾಲನೆಯಲ್ಲಿತ್ತು. ಆದರೆ, 2020ರಲ್ಲಿದ್ದ ಕೋವಿಡ್ ಸಾಂಕ್ರಾಮಿಕದ ಕಾರಣ ಕಂಪನಿಯ ನೌಕರರು ಮನೆಯಿಂದೇ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ.<br><br>ಉಳಿದ 19 ಎಕರೆ ಪ್ರದೇಶದಲ್ಲಿ ಕಿಯೋನಿಕ್ಸ್ ರವರು ಹಲವಾರು ಬಾರಿ ಸಹ-ಅಭಿವೃದ್ಧಿಕಾರರ ಒಡಗೂಡಿ IT-SEZ ಅಭಿವೃದ್ಧಿಪಡಿಸುವ ಸಲುವಾಗಿ Expression of Interest ಕರೆದಿದ್ದರು. ಆದರೆ ಯಾವುದೇ ಸಹ-ಅಭಿವೃದ್ಧಿಕಾರರು ಮುಂದೆ ಬರಲಿಲ್ಲ. ದಿನಾಂಕ 19 ಆಗಸ್ಟ್ 2022ರಂದು ನಡೆಸಿದ ಕಿಯೋನಿಕ್ಸ್‌ನ ಮಂಡಳಿ ಸಭೆಯಲ್ಲಿ, ಸದರಿ 19 ಎಕರೆ ಪ್ರದೇಶವನ್ನು ವಿಶೇಷ ಆರ್ಥಿಕ ವಲಯವಲ್ಲದ (Non-SEZ) ಪ್ರವರ್ಗಕ್ಕೆ ಪರಿವರ್ತಿಸಲು ನಿರ್ಣಯ ಕೈಗೊಳ್ಳಲಾಗಿದೆ.<br><br>ಈ IT SEZನಲ್ಲಿ ಯಾವುದೇ ಆಹಾರ ಸಂಸ್ಕರಣಾ ಪಾರ್ಕ್‌ಗೆ ಜಾಗವನ್ನು ಹಂಚಿಕೆ ಮಾಡಿರುವುದಿಲ್ಲ. ಈ ವಿಶೇಷ ಆರ್ಥಿಕ ವಲಯ ಪಾರ್ಕ್‌ನಲ್ಲಿ ಮಾಹಿತಿ ತಂತ್ರಜ್ಞಾನ (Information Technology) ಕೈಗಾರಿಕೆಗಳಿಗೆ ಮಾತ್ರ ಜಮೀನನ್ನು ಹಂಚಿಕೆ ಮಾಡಲು ಅವಕಾಶವಿದ್ದು, ಆಹಾರ ಸಂಸ್ಕರಣಾ ಪಾರ್ಕ್‌ನ್ನು ಸ್ಥಾಪಿಸಲು ಹಂಚಿಕೆ ಮಾಡಲು ಅವಕಾಶವಿರುವುದಿಲ್ಲ. |

(ಐಟಿಬಿಟಿ 97 ಎಲ್‌ಸಿಎಂ 2022)

**(ಡಾ॥ ಅಶ್ವಥ್ ನಾರಾಯಣ ಸಿ.ಎನ್)**
ಉನ್ನತ ಶಿಕ್ಷಣ, ವಿದ್ಯುನ್ಮಾನ ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.